Sri H. K. VEERANNA GOWDH.—The estimates refer not only to the cost of production per k.w., but also to the sites of the dam, the alignment of the dam and the tanks. The cost already estimated for production of electricity is not under revision.

ಶ್ರೀ ಆರ್. ಅನಂತರಾಮ್.—ದಯವಿಟ್ಟು ಇದನ್ನು ತೆಗೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರಕ್ಕೆ ಒತ್ತಾಯಮಾಡುವುದಕ್ಕೆ ಸರ್ಕಾರದವರು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಮೊದಲೇ ಅದಕ್ಕೆ ಉತ್ತರ ಹೇಳಿದ್ದೇನೆ.

ಶ್ರೀ ಪಿ. ಎಂ. ನಾಣಮಯ್ಯ.—ಇದರಲ್ಲಿ "The project has not been included in the Second Five-Year Plan" ಎಂದು ಹೇಳಿದ್ದಾರೆ. ಉಪಪ್ರಶ್ನೆಗಳಿಗೆ ಉತ್ತರ ಕೊಡುತ್ತ "it is included in the Second Five-Year Plan" ಎಂದು ಹೇಳಿದರು. ಇಂಥ ಉತ್ತರವನ್ನು ಏಕೆ ಕೊಟ್ಟಿದ್ದಾರೆಂಬುದನ್ನು ತಿಳಿಸಬೇಕು.

Mr. SPEAKER.—That is a modified reply given by the Hon'ble Minister. He says that it is included in the Second Five-Year Plan but priority has not been given. That is the reply the Hon'ble Minister has just now given and that is in the interest of the Hon'ble Member.

ಶ್ರೀ ಪಿ. ಎಂ. ನಾಣಮಯ್ಯ.—ಹಾಗಾದರೆ ಇದಕ್ಕೆ ಪ್ರಾಶಸ್ತ್ಯ ಕೊಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆಯೇ ಎಂದು ತಿಳಿಯಬೇಕಾಗಿದೆ.

ಅಧ್ಯಕ್ಷರು.—ಪ್ರಯತ್ನ ಮಾಡುತ್ತೇವೆಂದು ಅದಕ್ಕೂ ಉತ್ತರ ಕೊಟ್ಟಿದ್ದಾರೆ.

Haradanahalli-Amachavadi Road

Q.—22. Sri U. M. MADAPPA (Chamarajanagar).—

Will the Government be pleased to state :—

the amount spent by the concerned department on the Haradanahalli-Amachavadi Road in Chamarajanagar Taluk after the said road was transferred from the District Board to the Public Works Department (the amount provided this year under annual repair and special repair grants may be furnished) ?

A.—Sri H. K. VEERANNA GOWDH (Minister for Public Works.)—

(*i*) Rs. 17,827 up to the end of November 1956.

(*ii*) Under A.R. grant for 1956-57:—Rs. 2,400.

(*iii*) Under S. R. grant for 1956-57 :—Rs. 4,000.

ಶ್ರೀ ಯು. ಎಂ. ಮಾದಪ್ಪ.—1956—57ನೆಯ ವರ್ಷದ A.R. ಗ್ರಾಂಟ್ ಮತ್ತು S.R. ಗ್ರಾಂಟ್ ಮೇಲ್ಕಂಡ ರಸ್ತೆಗಾಗಿ ಕೊಟ್ಟಿದ್ದರೂ ಸಹ ಕಳೆದ ವರ್ಷದ ಬಿಲ್‌ಗಳಿಗೆ ಪಾವತಿ ಮಾಡುವುದಕ್ಕೆ ಅಡ್ವಸ್ಟ್ ಮಾಡಿದ್ದಾರೆಂಬುದು ತಮಗೆ ಗೊತ್ತಿದೆಯೇ ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲಿ ಅದಕ್ಕೆ ವಿವರಗಳಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಹಾಗಿದ್ದರೆ ಈಗ ಸಂಬಂಧಪಟ್ಟ ರಸ್ತೆಯಲ್ಲಿ ಮೋಟಾರ್ ವಗೈರೆ ವಾಹನಗಳು ತಿರುಗಾಡುವುದಕ್ಕೆ ಬಹಳ ಅನಾನುಕೂಲವಾಗಿರುವುದರಿಂದ ಸರ್ಕಾರದವರು ಇದಕ್ಕೆ ಸಾಕಾದಷ್ಟು ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈ ರಸ್ತೆಗೆ ಇರುವುದು ಮೈಲಿಗೆ 300 ರೂಪಾಯಿಗಳು. ಆದ್ದರಿಂದ ಆ ಹಣದಲ್ಲಿ ಎಷ್ಟರಮಟ್ಟಿಗೆ ರಸ್ತೆ ದುರಸ್ತು ಮಾಡಿಸಬಹುದೋ ಅಷ್ಟರಮಟ್ಟಿಗೆ ಮಾಡುತ್ತಾರೆ.

ಶ್ರೀ ಯು. ಎಂ. ಮಾದಪ್ಪ.—ವಾಹನ ಸೌಕರ್ಯಕ್ಕೆ ಬಹಳ ಅನಾನುಕೂಲವಾಗಿದ್ದು ಒಂದು ಹೋಬಳಿಯ ಜನರಿಗೆ ತೊಂದರೆಯಾಗಿದ್ದರೂ ಅಂಥ ಸಂದರ್ಭದಲ್ಲಿ ಸರ್ಕಾರದವರು S.R. ಗ್ರಾಂಟ್ ಕೊಡುವುದಕ್ಕೆ ಅವಕಾಶವಿಲ್ಲವೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ತೊಂದರೆ ಇದ್ದರೆ ಅದನ್ನು ನಿರಿಷಡಿನುವುದಕ್ಕೆ ಸ್ಪೆಷಲ್ ಗ್ರಾಂಟ್ ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಯು. ಎಂ. ಮಾದಪ್ಪ.—ಈಗ ಕೊಟ್ಟಿರುವುದಲ್ಲದೆ ಹೆಚ್ಚಾಗಿ ಕೊಡುವುದಕ್ಕೆ ಅವಕಾಶವಿಲ್ಲವೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅಗತ್ಯವಿದ್ದರೆ ಕೊಡೋಣ.

Pollibettagattadalla Road.

Q.—131. M. D. MACHAIYA (Siddapur).—

Will the Government be pleased to state :—

(*a*) whether they propose to consolidate the Pollibettagattadalla Road ;

(*b*) if so, when the work will be undertaken ;

(*c*) the amount allotted for this work ;

(*d*) whether it will be completed by March 1957 ?

A.—Sri H. K. VEERANNA GOWDH (Minister for Public Works).—

(*a*) Yes.

(*b*) It is proposed to be taken up in January 1957.

(*c*) Rs. 52,300.

(*d*) This may not be possible. Every attempt will however be made to complete the work quickly.

Sri M. D. MACHIAH.—Does the Government propose to complete the whole road by the end of 1957?

*Sri H. K. VEERANNA GOWDH.—Answer is given, Sir.

Mr. SPEAKER.—The answer is there; this may not be possible.'

Sri M. D. MACHIAH.—Does the Government propose to complete the whole length of six miles by the end of 1957?

Sri H. K. VEERANNA GOWDH.—If it refers to the calendar year, we will try our best to complete it. If it is official year, it may not be possible, Sir.

Sri P. C. UTAYYA.—May I know when the funds were first allotted for this purpose?

Sri H. K. VEERANNA GOWDH.—The information is not available.

Sri P. C. UTAYYA.—May I know Sir, whether some work has already been done?

Sri H. K. VEERANNA GOWDH.—Yes, Sir.

Restoration of Nalur Aamanikere tank.

Q.—53. Sri H. K. SHIVARUDRAPPA (Gundlupet-Heggadadevankote).—

Will the Government be pleased to state:—

(*a*) whether they have been requested to arrange the restoration of Nalur Amanikere tank of Gundlupet Taluk;

(*b*) whether survey of the above tank has been ordered, and if so whether the survey work has commenced;

(*c*) the expenditure estimated to be incurred towards the restoration of the above tank;

(*d*) the acreage of land expected to be irrigated on completion of restoration of that tank;

(*e*) the water level of the tank, when restored;

(*f*) the probable water-rate and contribution after it is restored;

(*g*) the total acreage of land likely to be submerged and the amount of compensation to be paid by them;

(*h*) the data relating to detailed survey, if any, of the above;

(*i*) if no detailed survey has been ordered so far, whether they propose to order the same?

A.—Sri H. K. VEERANNA GOWDH (Minister for Public Works).—

(*a*) Yes.

(*b*) Preliminary surveys have been conducted and arrangements are being made to conduct detailed surveys.

(*c*) Estimate has to be prepared only after conducting detailed survey work.

(*d*) About 600 acres.

(*e*) Does not arise, in view of reply to Clause (*b*) above.

(*f*) These are to be determined at the time of sanction to the estimate.

(*g*), (*h*) and (*i*) Does not arise in view of reply to Clause (*b*).

ಶ್ರೀ ಎಚ್. ಕೆ. ಶಿವರುದ್ರಪ್ಪ.—'ಬಿ' ಪ್ರಶ್ನೆಗೆ ಉತ್ತರವಾಗಿ ಸರ್ವೆ ಪರಿಶೀಲನೆ ಮಾಡಲಾಗಿದೆಯೆಂದು ಹೇಳಿದ್ದಾರೆ. ಅದರ ಪ್ರಕಾರ ಎಷ್ಟು ರೂಪಾಯಿ ಅಂದಾಜಾಗುತ್ತದೆ ಎಂಬುದನ್ನು ತಿಳಿಸುತ್ತೀರಾ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಇನ್ನೂ ಸರ್ವೆ ಪೂರ್ತಿಯಾಗಿಲ್ಲವಾದದ್ದರಿಂದ ಎಷ್ಟಾಗುತ್ತದೆಂದು ಹೇಳಲು ಸಾಧ್ಯವಿಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಸುಮಾರು 600 ಎಕರೆಗಳು ನೀರಾವರಿಗೆ ಬರುವುದಾಗಿ ತಿಳಿಸಲಾಗಿದೆ. ಯಾವ ಆಧಾರದ ಮೇಲೆ ಅಂಕಿಅಂಶಗಳನ್ನು ಸಂಗ್ರಹಿಸಿದ್ದೀರಿ?

Sri H. K. VEERANNA GOWDH.—Detailed survey work will be undertaken by the special projects sub-division attached to the Superintending Engineer, Mysore and thereafter detailed estimates will be prepared.

ಶ್ರೀ ಎಚ್. ಕೆ. ಶಿವರುದ್ರಪ್ಪ.—ತಪಶೀಲು ಸರ್ವೆ ಪರಿಶೀಲನೆ ಮಾಡಬೇಕೆಂದು ಆಜ್ಞೆ ಮಾಡಿದ್ದೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಮಾಡುತ್ತೇವೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—600 ಎಕರೆ ಗಳೆಂದು ಹೇಳಿದ್ದೀರಿ. ಅದು ಸರಿಯಿಲ್ಲ, ಇನ್ನೂ ಜಾಸ್ತಿ ಆಗುತ್ತದೆ. ಸುಮಾರು ಎರಡುಸಾವಿರ ಎಕರೆ ಆಗುತ್ತದೆ ಎಂಬ ಅಭಿಪ್ರಾಯವಿದೆ. ಅದಕ್ಕೆ ತಾವು ಏನು ಹೇಳುತ್ತೀರಿ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ಅಭಿಪ್ರಾಯ ವೆಂದು ಹೇಳುತ್ತೇನೆ, ಅಷ್ಟೇ.

ಶ್ರೀ. ಎಚ್. ಕೆ. ಶಿವರುದ್ರಪ್ಪ.—ಸರ್ವೆ ಪರಿಶೀಲನೆ ಮುಗಿಯಬೇಕಾದರೆ ಎಷ್ಟು ಕಾಲ ಬೇಕಾಗುತ್ತದೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದನ್ನು ಈಗಲೇ ಹೇಳುವುದಕ್ಕೆ ಆಗುವುದಿಲ್ಲ.